ದಿನಾಂಕಃ **09.08.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಮಾನ್ಯ ಶ್ರೀ **HAP** ವಕೀಲರಿಂದಃ

ನನ್ನ ತಂದೆಯ ತಾಯಿ ಅಕ್ಕಮ್ಮ ಎಂದರೆ ಸರಿ. ಅವರ ತವರು ಮನೆ ವಾದಿ ಮತ್ತು ಪ್ರತಿವಾದಿಗಳ ಊರು ಆಗಿರುತ್ತದೆ ಎಂದರೆ ಸರಿ. ಅಕ್ಕಮ್ಮ ರವರ ತವರು ಮನೆಗೆ ನನ್ನ ಅಕ್ಕ ಗೌರಮ್ಮ ರವರವನ್ನು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳು ನನ್ನ ಸೋದರ ಮಾವಂದಿರು ಎಂದರೆ ಸರಿ.

**2009** ರಲ್ಲಿ **1** ನೇ ವಾದಿ ಹಾಗೂ **3** ನೇ ಪ್ರತಿವಾದಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂದತೆ ಮಾಡಿಕೊಂಡ ವಿಭಾಗ ಪತ್ರದ ಮಾತುಕತೆಗೆ ನಾನು ಸೇರಿದ್ದೆನು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ವೆಂಕಟೇಶಪ್ಪ ಬೊಮ್ಮತನಹಳ್ಳಿಯವರು ಎಂದರೆ ಸರಿ. ಗೌರಮ್ಮ ರವರಿಗೆ ನನ್ನ ತಂದೆ ಹಾಗೂ ವೆಂಕಟೇಶಪ್ಪ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರ್. ನನಗೆ ಸದರಿ ವಿಚಾರ ತಿಳಿಸಿ ಮಾಡಿಕೊಟ್ಟಿರುತ್ತಾರೆ. ದಾನ ಪತ್ರ ಮಾಡಿಕೊಡುವಾಗ **2** ನೇ ಪ್ರತಿವಾದಿ ಅಥವಾ ಅವರ ಕುಟುಂಬದವರು ನೋಂದಣಿ ಕಛೇರಿ ಹತ್ತಿರ ಬಂದಿರಲಿಲ್ಲ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ದಾನ ಪತ್ರ ಮಾಡಿಕೊಟ್ಟ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾನ ಪತ್ರ ಮಾಡುವ ಸಮಯದಲ್ಲಿ **2** ನೇ ಪ್ರತಿವಾದಿ ಅಥವಾ ಅವರ ಯಾವುದೇ ಕುಟುಬಂದವರು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾನ ಪತ್ರದಲ್ಲಿ ನಮೂದಾಗಿರುವ ಸ್ವತ್ತಿನ ಬಗ್ಗೆ ನನಗೆ ತಿಳಿದಿದೆ ಅದು ದಾನಿಯ ವೈಯಕ್ತಿಕ ಆಸ್ತಿ ಆಗಿರುತ್ತದೆ. ಸದರಿ ಆಸ್ತಿ ಅವರಿಗೆ ಹೇಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. **2** ನೇ ಪ್ರತಿವಾದಿಗೆ ಅವರ ದೊಡ್ಡಮ್ಮ ಅವರನ್ನು ಸಾಕಿದ ಕಾರಣ ಕೊಟ್ಟಿರುವ ಆಸ್ತಿ ದಾವಾ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ತಿಮ್ಮಕ್ಕ ಹಾಗೂ ಅವರ ಮಗ ಕುಂಟಪ್ಪ ರವರು **1** ಮತ್ತು

**2** ನೇ ಪ್ರತಿವಾದಿಯೊಂದಿಗೆ ಬಹಳಷ್ಟು ವರ್ಷ ವಾಸವಿದ್ದರು ಎಂದರೆ ಸರಿ. ತಿಮ್ಮಕ್ಕ ಹಾಗೂ ಅವರ ಮಗ ಕುಂಟಪ್ಪ ರವರು **1** ನೇ ಪ್ರತಿವಾದಿ ಮನೆಯಲ್ಲಿಯೇ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಬಗ್ಗೆ ಚೆನ್ನಾಗಿ ಮಾಹಿತಿ ಇರುತ್ತದೆ ಎಂದರೆ ಸರಿ. ನನ್ನ ತಂದೆ **2** ನೇ ಪ್ರತಿವಾದಿಯನ್ನು ಕರೆಸಿಕೊಂಡು ಅದೇ ಊರಿನವರನ್ನು ಸಾಕ್ಷಿ ಮಾಡಿ ಮೋಸದಿಂದ ದಾನ ಪತ್ರ ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. **2** ನೇ ಪ್ರತಿವಾದಿಯ ಮಕ್ಕಳಿಗೆ ವಿಚಾರ ತಿಳಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ